ಆಡಿಕೊಳ್ತಾರೋ ಅನ್ನೋ ಪುಡಿ ಮಾತುಗಳಿಗೆ ಬೆಲೆ ಕೊಟ್ಟಷ್ಟು, ಮಕ್ಕಳ ಬದುಕಿನ ಬಗ್ಗೆ ಅವರ ಭವಿಷ್ಯದ ಬಗ್ಗೆ ಯಾಕೆ ಯೋಚ್ನೆ ಮಾಡಲ್ಲ? ನಿಮ್ಮ ರೂಪಾಳಿಗೆ ಒಂದು ಕಡೆ ಇಷ್ಟಪಟ್ಟವನು ಸಿಗಲಿಲ್ಲ ಅನ್ನೋ ಬಾಧೆ. ಇನ್ನೊಂದುಕಡೆ ಕಟ್ಟಿಕೊಂಡವನಿಂದ ಸುಖ ಸಿಗ್ತಾ ಇಲ್ಲ. ಅಡ್ಡದಾರಿ ತುಳಿಯೋಕೆ ಮನಸ್ಸೊಪ್ತಾ ಇಲ್ಲ. ಈ ಗೊಂದಲದ ತಾಕಲಾಟದಲ್ಲಿ ನಿಮ್ಮ ಹುಡುಗಿ ಮೆಂಟಲಿ ತುಂಬಾ ಡಿಸ್ಟರ್ಬ್ ಆಗಿದಾಳೆ' ಎಂದು ಶ್ರಾವಣಿ ಗಂಭೀರವಾಗಿ ಹೇಳಿದ್ದು ಕೇಳಿ, ಊಹೆಗೂ ನಿಲುಕದ ರೂಪಾಳ ಮನಸ್ಥಿತಿಯನ್ನ ನೆನೆದು ಅವರಿಬ್ಬರು ಧರಣಿಗಿಳಿದು ಹೋಗಿದ್ದರು. ಗಂಡನಿಗೆ ಅವಸರಪಡಿಸಿ ಈ ಮದುವೆ ಮಾಡಿದ್ದು ನಾನೇ ಅನ್ನೋದು ಇಡೀ ಊರಿಗೇ ಗೊತ್ತು. ಬಂಧು-ಬಳಗಕ್ಕೂ ತಿಳಿದ ಸಂಗತಿಯೆ. ಬಂಗಾರದಂಥ ಹುಡುಗಿ ಬಾಳ್ನ ಅನ್ಯಾಯವಾಗಿ ಹಾಳು ಮಾಡಿಬಿಟ್ಲು ಅನ್ನೋ ಅಪವಾದ ತನಗೆ ಕಟ್ಟಿಟ್ಟ ಬುತ್ತಿ ಎಂದುಕೊಂಡಾಗ, ರೂಪಾಳ ಸೋದರಮಾವಂದಿರ ಒರಟು ಮುಖಗಳು ಕಣ್ಣಮುಂದೆ ತೇಲಿ ಬಂದಿದ್ದವು. ಈ ವಿಚಾರ ಅವರಿಗೆ ಗೊತ್ತಾದರೆ ನನ್ನನ್ನ ಸುಮ್ನೆ ಬಿಡ್ತಾರ? ಎನ್ನುವ ಭಯ ಕಲಾವತಿಯ ಮನಸ್ಸಿಗೆ ಮುತ್ತಿಗೆ ಹಾಕಿತ್ತು. ಕೈ ಊನ ಇದ್ರೆ ಬಾಳಬಹುದು. ಕಾಲು ಊನ ಇದ್ರೆ ಬದುಕಬಹುದು. ಆದರೆ ಹಾಸಿಗೆಯ ವಿಚಾರದಲ್ಲಿ ಊನವಾದರೆ ಹೆಣ್ಣಿನ ಜೀವನ ಎಷ್ಟೊಂದು ನರಕ ಎನ್ನುವುದು ತಾನೂ ಒಂದು ಹೆಣ್ಣಾಗಿ ಕಲಾವತಿ ಅರ್ಥ ಮಾಡಿಕೊಂಡಿದ್ದಳು.

ಅವಸರದಲ್ಲಿ ಅವಳಿಗೆ ಮದುವೆ ಮಾಡಲು ಅಡಾವುಡಿಯಲ್ಲಿ ಓಡಾಡುತ್ತಿದ್ದ ಉಗ್ರಪ್ಪನಿಗೆ ಅವರಣ್ಣ ಒಂದು ಎಚ್ಚರಿಕೆ ಮಾತು ಹೇಳಿದ್ದು ಕಲಾವತಿಗೆ ಈಗ ಬೇಡ ಬೇಡಂದ್ರು ನೆನಪಿಗೆ ಬಂದಿತ್ತು, 'ಹುಡುಗನಿಗೆ ಆಸ್ತಿ-ಅಡವು ಜಾಸ್ತಿಯಿದೆ ಅನ್ನೋ ಕಾರಣಕ್ಕೆ ದುಡುಕಬೇಡಕಣಲೆ ಉಗ್ರ, ಅವನ ಪೂರ್ವಾಪರ ವಿಚಾರಿಸು. ಯಾರೋ ಹೇಳಿದ್ರು, ಹುಡುಗ ಒಳ್ಳೆಯವನೆ, ಗದ್ಲಗಲಾಟೆಯವನೇನು ಅಲ್ಲ. ಆದರೆ ಒಂದೊಂದ್ಸಲ ಹೆಣ್ಣಂಗ ಇದ್ದಂಗೆ ಇರ್ತಾನಂತೆ. ಈಡು-ಜೋಡು ಚೆನ್ನಾಗಿದ್ರೆ ಸಾಕು. ಅಂತಹ ಆಸ್ತಿನ ನಾವು ಸಂಪಾದಿಸಬಹುದು. ಮದುವೆ ಅಂದ್ರೆ ಚಂದಕ್ಕೆ ಬಳೆ ತೊಟ್ಕಂಡು ಆಮೇಲೆ ಕೊಡವಿದ್ರೆ ಹೋಗಲ್ಲ. ಯೋಚ್ನೆ ಮಾಡಿ ಮುಂದಕ್ಕೆ ಹೆಜ್ಜೆ ಇಡು' ಅಂತ ಗಿಣಿಗೆ ಹೇಳ್ದಂಗೆ ಹೇಳಿದ್ದ. ಆದರೆ ಕಲಾವತಿ ಗಂಡನ ಹಿತ್ತಾಳೆ ಕಿವಿಯನ್ನ ಹಿಂಡಿ, 'ಒಳ್ಳೆ ಮಂತ್ಯಾನ ಸಿಕ್ತು ಅನ್ನೋ ಹೊಟ್ಟೆಕಿಚ್ಚಿಗೆ ನೂರುಜನ ನೂರು ಮಾತು ಹೇಳ್ತಾರೆ. ಅದ್ನೆಲ್ಲ ಕೇಳಿಕೊಂಡಿದ್ರೆ ಇವಳು ನಮ್ಮ ಕಣ್ಣಿಗೆ ಮಣ್ಣೆರಚಿ ಹೋಗೊದಂತು ಗ್ಯಾರಂಟಿ' ಎಂದು ರೂಪಾಳು ಪ್ರೀತಿಸಿರುವ ವಿಚಾರ ನೆನಪಿಸಿ, ಉಗ್ರಪ್ಪನ್ನ ರೊಚ್ಚಿಗೆಬ್ಬಿಸಿದ್ದರಿಂದ ತರಾತುರಿಯಲ್ಲಿ ಮಗಳ ಮದುವೆ ಮಾಡಿದ್ದನು. ಈಗ ಮುಖ ಇಳಿಬಿಟ್ಕೊಂಡು ಕುಳಿತಿದ್ದ ಕಲಾವತಿಯ ಸೋಗಲಾಡಿತನವನ್ನು ಕಂಡು ಶ್ರಾವಣಿಗೆ ಅಸಮಾಧಾನವಿದ್ದರೂ ಅದನ್ನು ತೋರಗೊಡದೆ, 'ನಿಮ್ಮ ಮನಸ್ಥಿತಿ ನನಗೆ ಅರ್ಥವಾಗ್ತಿದೆ. ಬಟ್ ವಾಸ್ತವತೆಯನ್ನು ಒಪ್ಕೋಬೇಕು. ಇದು ರೂಪಾಳೊಬ್ಬಳ ಸಮಸ್ಯೆ ಯಲ್ಲ ಎನ್ನುವುದಕ್ಕಿಂತ ಸಮಸ್ಯೆ ರೂಪಾಳದೇ ಅಲ್ಲ.'

'ಹಾಗಾದ್ರೆ ಇದಕ್ಕೆ ಪರಿಹಾರ ಏನು ಶ್ರಾವಣಿ?' ಸುಜಾತ ವಾಸ್ತವ ನೆಲೆಯಲ್ಲಿ ಕೇಳಿದಳು.

'ನನಗೆ ತಿಳಿದಮಟ್ಟಿಗೆ ನಿಮ್ಮ ರೂಪಾಳ ಗಂಡನ್ನ ಲೈಂಗಿಕ ತಜ್ಞರ ಬಳಿ ಕರಕೊಂಡು ಹೋಗೋದು ಬೆಸ್ಟ್ ಚಾಯ್ಸ್ ಅನ್ಸುತ್ತೆ. ಆ ಸಮಸ್ಯೆ ನಡಂತ್ರ ಬಂದಿದ್ರೆ ಪರಿಹರಿಸಬಹುದು. ಇಲ್ಲಾಂದ್ರೆ..' ಶ್ರಾವಣಿಯ ಅರ್ಧಂಬರ್ಧ ಮಾತುಗಳು ಮೊದಲೇ ಗೊಂದಲದಲ್ಲಿದ್ದ ಸುಜಾತಳಿಗೆ ಮತ್ತಷ್ಟು ಮಕರಸಿಕ್ಕು ಹಿಡಿಸಿದ್ದರಿಂದ, 'ಇಲ್ಲಾಂದ್ರೆ ಏನು ಮಾಡಬೇಕು ಶ್ರಾವಣಿ' ಆತಂಕದಿಂದ ಕೇಳಿದಳು. 'ಡೊಂಟ್ ವರಿ ಸುಜಿ, ಈಗ್ಲೆ ನಿರಾಸೆ ಪಡೋದು ಬೇಡ. ಮೊದ್ಲುರೂಪಾ ಮಾಮೂಲು ಮನುಷ್ಯಳಾಗಲಿ. ಅವಳ ಮನಸ್ಸಿಗೆ ಸ್ಟ್ರೆಸ್ ಆಗುವಂತಹ ವಿಚಾರ ಹೇಳದೆ ನಾನು ಕೊಟ್ಟಿರೊ ಮೆಡಿಸಿನ್ ಸರಿಯಾಗಿ ಬಳಸಿ. ಸ್ವಲ್ಪ ದಿನ ಅವಳನ್ನು ಪ್ರಶಾಂತವಾದ ವಾತಾವರಣದಲ್ಲಿ ಇರೋಕೆ ವ್ಯವಸ್ಥೆ ಮಾಡು. ಮುಂದಿನ ವಿಚಾರ ಆಮೇಲೆ ಯೋಚ್ನೆ ಮಾಡೋಣ' ಎಂದು ಸುಜಾತಳಿಗೆ ಶ್ರಾವಣಿ ಧೈರ್ಯ ಹೇಳಿದಾಗ, ರೂಪಾಳ ಭವಿಷ್ಯತ್ತು ನೆನೆದು ಉಗ್ರಪ್ಪನ ರೌದ್ರಾವತಾರ ಕಣ್ಮುಂದೆ ಸುಳಿದಂತಾಗಿದ್ದರಿಂದ ಕಂಗಾಲಾದ ಕಲಾವತಿ ತಣ್ಣಗೆ ತಿರುಗುವ ಸೀಲಿಂಗ್ ಫ್ಯಾನಿನ ಗಾಳಿಯಲ್ಲೂ ಬೆವರತೊಡಗಿದಳು.

●